# ದಿನಾಂಕ:29-10-2010 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

**ವಿಷಯದ ಸಂಖ್ಯೆ: 11 (125)/2010-11**

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ನಂ: 51ರ ಎನ್.ಆರ್.ಕಾಲೋನಿ, 3 ಮತ್ತು 4ನೇ ಮುಖ್ಯರಸ್ತೆ ನಡುವೆ ಇರುವ 30x118 ಅಡಿಗಳ ಪಾಲಿಕೆಯ ನಿವೇಶನವನ್ನು 1995 ರಲ್ಲಿ ಸರ್ಕಾರದ ಆದೇಶ ಸಂಖ್ಯೆ: ವನಇ/104/ಎಂಎನ್‌ಜಿ/85, ದಿನಾಂಕ:13-06-1994 ರಂತೆ, 15 ವರ್ಷಗಳ ಅವಧಿಗೆ ಮಾಸಿಕ 100/- ರೂ.ಗಳಂತೆ ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ ಸಂಸ್ಥೆಗೆ ಗುತ್ತಿಗೆ ನೀಡಲಾಗಿದ್ದು, ಇದರ ಗುತ್ತಿಗೆ ಅವಧಿಯು ಜುಲೈ-2010 ಕ್ಕೆ ಮುಕ್ತಾಯವಾಗುತ್ತಿದ್ದು, ಸದರಿ ಸಂಸ್ಥೆಯವರು ಮುಂದಿನ 99 ವರ್ಷಗಳ ಅವಧಿಗೆ ನವೀಕರಿಸಲು ಕೋರಿರುತ್ತಾರೆ.

ಕಂದಾಯ ಅಧಿಕಾರಿ (ದಕ್ಷಿಣ) ರವರು ಸ್ಥಳ ಪರಿಶೀಲಿಸಿ, ಸದರಿ ಜಾಗದಲ್ಲಿ ಗುತ್ತಿಗೆದಾರರು 3 ಮಹಡಿಗಳ ಕಟ್ಟಡಗಳನ್ನು ಕಟ್ಟಿದ್ದು, ಅದರಲ್ಲಿ ಕನ್ನಡ ನಾಡಿನ ಅಮೂಲ್ಯ ಆಸ್ತಿಯಾದ ಕನ್ನಡ ಸಾಂಸ್ಕೃತಿಕ ಮಹತ್ವದ ಪ್ರಾಚೀನ ಓಲೆಗರಿ ಗ್ರಂಥಗಳ ಸಂಗ್ರಹಾಲಯ, ಗ್ರಂಥಾಲಯ ಮತ್ತು ಉಚಿತ ವಾಚನಾಲಯ ಇತ್ಯಾದಿಗಳಿದ್ದು, ಇಲ್ಲಿ ಕನ್ನಡ ಸಾಹಿತ್ಯ, ಸಾಂಸ್ಕೃತಿಕ, ಶೈಕ್ಷಣಿಕ ಚಟುವಟಿಕೆಗಳು ನಡೆಯುತ್ತಿದ್ದು, ಇದರಿಂದ ಸಾರ್ವಜನಿಕರಿಗೆ ಹೆಚ್ಚು ಪ್ರಯೋಜನವಾಗುತ್ತಿರುತ್ತದೆ ಹಾಗೂ ಪಿ.ಹೆಚ್.ಡಿ ಮತ್ತು ಎಂಫಿಲ್ ನಂತಹ ಉನ್ನತ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ಮಾರ್ಗದರ್ಶನವನ್ನು ಸಹ ನೀಡುತ್ತಿರುತ್ತಾರೆ ಎಂದು ವರದಿ ಮಾಡಿರುತ್ತಾರೆ ಹಾಗೂ ಸದರಿ ಗುತ್ತಿಗೆಯನ್ನು 15 ವರ್ಷಗಳ ಅವಧಿಗೆ ನವೀಕರಿಸಲು ಶಿಫಾರಸ್ಸು ಮಾಡಿರುತ್ತಾರೆ.

ಅದರಂತೆ ಅಪರ ಆಯುಕ್ತರು (ದಕ್ಷಿಣ) ರವರು ಬಿ.ಎಂ.ಶ್ರೀ ಪ್ರತಿಷ್ಠಾನ (ರಿ) ರವರು ಕನ್ನಡ ಸಾಹಿತ್ಯ ಪರಂಪರೆಗಳನ್ನು ಬೆಳೆಸುತ್ತಿರುವ ಹಿನ್ನಲೆಯಲ್ಲಿ ಹಾಗೂ ಸದರಿ ಸಂಸ್ಥೆಯವರಿಂದ ಸಾರ್ವಜನಿಕರಿಗೆ ಹೆಚ್ಚು ಪ್ರಯೋಜನವಾಗುತ್ತಿರುವುದರಿಂದ 30x118 ಅಡಿಗಳ ಜಾಗವನ್ನು ಜುಲೈ-2010 ರಿಂದ ಮುಂದಿನ 25 ವರ್ಷಗಳಿಗೆ ಗುತ್ತಿಗೆಯನ್ನು ತಿಂಗಳಿಗೆ ರೂ.200/-ಗಳಂತೆ ನಿಗಧಿಪಡಿಸಲು ಅಪೀಲು ಸ್ಥಾಯಿ ಸಮಿತಿ ಹಾಗೂ ಮಾನ್ಯ ಆಡಳಿತಗಾರರ ಮುಂದೆ ಪ್ರಸ್ತಾವನೆಯನ್ನು ಮಂಡಿಸಲು ಕೋರಿರುತ್ತಾರೆ. ಆದರೆ, ಗುತ್ತಿಗೆ ಮೊತ್ತವನ್ನು ಯಾವ ಆಧಾರದ ಮೇಲೆ ನಿಗಧಿಪಡಿಸಿರುವುದೆಂದು ಕಂಡು ಬರುತ್ತಿಲ್ಲ. ಸರ್ಕಾರದ ಆದೇಶ ಸಂಖ್ಯೆ:ನಅಇ/129/ಟಿಎಂಡಿ/2002, ಬೆಂಗಳೂರು, ದಿನಾಂಕ:02-06-2003 ರ ಮಾರ್ಗಸೂಚಿಯಲ್ಲಿ ಪಾಲಿಕೆ ಸ್ವತ್ತುಗಳನ್ನು ಗುತ್ತಿಗೆ ಆಧಾರದ ಮೇಲೆ ನೀಡಿದಲ್ಲಿ, ಮಾರುಕಟ್ಟೆ ದರ ಹಾಗೂ ಸಾರ್ವಜನಿಕ ಹರಾಜು ಮೂಲಕವೇ ನೀಡುವುದೆಂದು ಆದೇಶವಿರುತ್ತದೆ.

..........................2

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಗುತ್ತಿಗೆ ನವೀಕರಣಕ್ಕೆ ಸಂಬಂಧಪಟ್ಟ ಪ್ರಕರಣಗಳನ್ನು ಮಾನ್ಯ ಆಯುಕ್ತರು ಸಂಬಂಧಪಟ್ಟ ಸ್ಥಾಯಿ ಸಮಿತಿಗಳ ಮುಂದಿರಿಸಲು ಸೂಚಿಸಿದ್ದು, ಸರ್ಕಾರದ ಆದೇಶ ಸಂಖ್ಯೆ:ನಅಇ/222/ಎಂ.ಎನ್‌.ವೈ/2008, ದಿನಾಂಕ:03-09-2009 ರಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸರಹದ್ದಿನಲ್ಲಿ ಬರುವ ಸಾರ್ವಜನಿಕರ ಸರ್ಕಾರಿ ಸ್ವತ್ತುಗಳನ್ನು ಬೇರೆಯವರಿಗೆ ಗುತ್ತಿಗೆ ಆಧಾರದ ಮೇಲೆ ನೀಡುವುದಾಗಲೀ ಅಥವಾ ಮಾರಾಟ ಮಾಡುವ ಬದಲಾಗಿ ಅವುಗಳನ್ನು ಸೂಕ್ತವಾಗಿ ಅಭಿವೃದ್ಧಿಪಡಿಸುವ ವಿಷಯದಲ್ಲಿ ಸೂಕ್ತ ಸಲಹಾ ಶಿಫಾರಸ್ಸುಗಳನ್ನು ನೀಡಲು ಸಂಬಂಧಪಟ್ಟ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಸಲಹಾ ಸಮಿತಿಯನ್ನು ರಚಿಸಲಾಗಿದ್ದು, ಈ ಸಮಿತಿಯ ಮುಂದೆ, ಪ್ರಸ್ತಾಪಿತ ಪ್ರಕರಣವನ್ನು ಮಂಡಿಸುವ ಬಗ್ಗೆ ಅನುಮೋದನೆ ಕೋರಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:04-08-2010 ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:12-10-2010 ರ ನಿರ್ಣಯ.

ಶ್ರೀ.ಬಿ.ಎಸ್.ಸತ್ಯನಾರಾಯಣ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:12-10-2010 ರ ನಿರ್ಣಯವನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯರವರು ಶ್ರೀ.ಬಿ.ಎಸ್.ಸತ್ಯನಾರಾಯಣರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>**ನಿರ್ಣಯ:**</u> "ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:12-10-2010 ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

ಎಸ್.ಕೆ.ನಟರಾಜ

**(ಎಸ್‌.ಕೆ. ನಟರಾಜ)**

ಮಹಾಪೌರರು